ಸಿಸಿ ಃ **27/2024**

**ಚಾಸಾ –1**

**ಪ್ರಾಸಾ –3**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 27/2024**

ಸಾಕ್ಷಿದಾರರ ಹೆಸರುಃ ಲಕ್ಷ್ಮೀಶ.ಸಿ
ತಂದೆಯ ಹೆಸರುಃ ಲೇಟ್ ಆರ್.ಎನ್.ಚಿಕ್ಕೇಗೌಡ
ವಯಸ್ಸುಃ **47**
ವೃತ್ತಿಃ ಅಬಕಾರಿ ಉಪಾಧೀಕ್ಷಕರು
ವಾಸಸ್ಥಳಃ ಬೆಂಗಳೂರು.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **22-02-2025**

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನಾನು ಫೆಬ್ರುವರಿ **2020** ರಿಂದ ದಿಃ **06-08-2024** ರವರೆಗೆ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ. ದಿಃ **06-08-2023** ರಂದು ನಾನು ಮತ್ತು ನನ್ನ ಸಿಬ್ಬಂದಿಗಳಾದ ಚಾಸಾ **4** ರಿಂದ **6** ರವರೊದಿಗೆ ಇಲಾಖಾ ವಾಹನದಲ್ಲಿ ಬಜೆಗುಂಡಿ ಗ್ರಾಮದಲ್ಲಿ ಸಂಜೆ **7** ಗಂಟೆಗೆ ಗಸ್ತು ಮಾಡುತ್ತಿರುವಾಗ ಚಾಸಾ **5** ರವರಿಗೆ ಬಂದ ಖಚಿತ ಮಾಹಿತಿ ಏನೇಂದರೆ, ಸೋಮವಾರಪೇಟೆ ತಾಲ್ಲೂಕಿನ ಗರಗಂದೂರು ಬಿ ಗ್ರಾಮದ ನಿವಾಸಿಯಾದ ಎನ್.ಸಿ.ದಾಮೋದರ್ ರವರ ಮನೆಯಲ್ಲಿ ಅಕ್ರಮವಾಗಿ ಮದ್ಯದ ದಾಸ್ತಾನು ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ, ಚಾಸಾ **5** ರವರು ನನಗೆ ಲಿಖಿತ ದೂರನ್ನು ನೀಡಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡ ಮೇರೆಗೆ, ಕೂಡಲೇ ನಾವು ಕಾರ್ಯಪ್ರವರ್ತರಾಗಿ ಗರಗಂದೂರು ಬಿ ಗ್ರಾಮದ ಬಳಿ ಬರಲು ಅಲ್ಲೇ ರಸ್ತೆ ಬಳಿ ಹಾದು ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನು ಪರಿಚಯ ಮಾಡಿಕೊಂಡು ನಾವು ಬಂದ ವಿಷಯ ಅವರಿಗೆ ತಿಳಿಸಿ, ಪಂಚರಾಗಿ ಬರಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿರುತ್ತಾರೆ ಅವರು ಚಾಸಾ **2** ಮತ್ತು **3** ಆಗಿರುತ್ತಾರೆ. ಅವರೊಂದಿಗೆ ಆರೋಪಿಯ ಮನೆ ಬಳಿ ಬರಲು ಮನೆಯ ಒಳಗಡೆ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಕೇಳಲಾಗಿ ಎನ್.ಸಿ.ದಾಮೋದರ್ ಎಂದು ತಿಳಿಸಿರುತ್ತಾರೆ. ಆ ವ್ಯಕ್ತಿಗೆ ನಾವು ಬಂದ ವಿಷಯ

**ಸಿಸಿ ಃ 27/2024**
**ಚಾಸಾ –1**
**ಪ್ರಾಸಾ –3**

ತಿಳಿಸಿ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯ ಇಲ್ಲದಿದ್ದರಿಂದ ಸ್ಥಳದಲ್ಲಿ ಶೋಧನಾ ವಾರೆಂಟ್ ತಯಾರಿಸಿಕೊಂಡು ಪಂಚರ ಸಹಿ ಪಡೆದು ಪಂಚರೊಂದಿಗೆ ಮನೆಯನ್ನು ಪ್ರವೇಶಿಸಿ ಶೋಧನಾ ಕಾರ್ಯ ಪ್ರಾರಂಭ ಮಾಡಿರುತ್ತೇವೆ. ಮನೆಯ ಮೇಲ್ಚಾವಣಿಯು ಶೀಟಿನಿಂದ ಕೂಡಿದ್ದು, ಮನೆಯ ಹಾಲ್ ನ ಮೂಲೆಯಲ್ಲಿ **3** ಪ್ಲಾಸ್ಟಿಕ್ ಚೀಲದಲ್ಲಿ ಏನೋ ವಸ್ತುಗಳು ಇರುವುದು ಗೋಚರಿಸಿದ್ದು, ಅದನ್ನು ಪಂಚರ ಸಮಕ್ಷಮ ತೆರೆದು ನೋಡಲಾಗಿ ಮದ್ಯದ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂದಿರುತ್ತದೆ. ಮೇಲ್ಕಂಡ ಗೋಣಿ ಚೀಲಗಳಿಗೆ ಕ್ರಮ ಸಂಖ್ಯೆ **1** ರಿಂದ **3** ಎಂದು ನೀಡಲಾಯಿತು. ಕ್ರಮ ಸಂಖ್ಯೆ **1** ರ ಚೀಲ ಬಿಳಿ ಹಸಿರು ಕಿತ್ತಲೆ ಮಿಶ್ರಿತ ಪ್ಲಾಸ್ಟಿಕ್ ಚೀಲವಾಗಿದ್ದು, ಅದರಲ್ಲಿದ್ದ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಎಣಿಕೆ ಮಾಡಲಾಗಿ **180** ಮಿಲಿಯ **79** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಒ.ಪಿ ಇಂಡಿಯನ್ ಬ್ರಾಂಡಿ ಮದ್ಯ ಇರುತ್ತದೆ, ಒಟ್ಟು **14.220** ಲೀಟರ್ ಇರುತ್ತದೆ. **2**ನೇ ಪ್ಲಾಸ್ಟಿಕ್ ಚೀಲ ಹಸಿರು ಮತ್ತು ಬಿಳಿ ಮಿಶ್ರಿತ ಪ್ಲಾಸ್ಟಿಕ್ ಚೀಲ ಆಗಿದ್ದು ಅದರಲ್ಲಿ **90** ಮಿಲಿಯ **200** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಒ.ಪಿ ಇಂಡಿಯನ್ ಬ್ರಾಂಡಿ ಮದ್ಯ ಇರುತ್ತದೆ, ಒಟ್ಟು **18** ಲೀಟರ್ ಇರುತ್ತದೆ. **3**ನೇ ಪ್ಲಾಸ್ಟಿಕ್ ಚೀಲ ಬಿಳಿ ಕೆಂಪು ಹಸಿರು ಮಿಶ್ರಿತವಾಗಿದ್ದು ಅದರಲ್ಲಿ **90** ಮಿಲಿಯ **165** ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಒ.ಪಿ ಇಂಡಿಯನ್ ಬ್ರಾಂಡಿ ಮದ್ಯ ಇರುತ್ತದೆ, ಒಟ್ಟು **14.850** ಲೀಟರ್ ಇರುತ್ತದೆ. ಸ್ಥಳದಲ್ಲಿದ್ದ ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ಹೇಳಿರುತ್ತಾರೆ. ಆ ವ್ಯಕ್ತಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ಪಡೆಯಲಾಯಿತು. ತಮ್ಮ ಬಳಿ ಯಾವುದಾದರೂ ರಹದಾರಿ ಪತ್ರ ಇದೆಯ ಮತ್ತು ಯಾವ ಉದ್ದೇಶಕ್ಕೆ ಇಟ್ಟುಕೊಂಡಿದ್ದೀರಾ ಎಂದು ಕೇಳಿದಾಗ, ರಹದಾರಿ ಪತ್ರ ಇಲ್ಲ ಅದನ್ನು ಮಾರಾಟ ಮಾಡಲು ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯವನ್ನು ವಶಪಡಿಸಿಕೊಳ್ಳಲಾಯಿತು, ವಶಪಡಿಸಿಕೊಂಡ

ಕ್ರಮ ಸಂಖ್ಯೆ 1ರ ಚೀಲದಿಂದ 180 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು, 2ನೇ ಚೀಲದಲ್ಲಿ 90 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು, 3ನೇ ಚೀಲದಿಂದ 90 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರಾಂಡಿಯನ್ನು ರಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆಯಲಾಯಿತು ಒಟು 3.600 ಲೀಟರ್ ಮದ್ಯ ಇರುತ್ತದೆ. ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಬಿಗಿದು, ಹರಗಿನ ಸಹಾಯದಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಪಂಚರ ಸಹಿ ಮತ್ತು ಆರೋಪಿಯ ಸ್ವ ವಿಳಾಸವಿರುವ ಚೀಟಿಯನ್ನು ಅಂಟಿಸಲಾಯಿತು. ಅದೇ ರೀತಿ ಉಳಿದ ಮದ್ಯ ಇದ್ದಂತಹ 3 ಚೀಲಗಳಿಗೂ ಸಹ ಪಂಚರ ಸಹಿ ಮತ್ತು ಆರೋಪಿಯ ಸ್ವ ವಿಳಾಸವಿರುವ ಚೀಟಿಯನ್ನು ಅಂಟಿಸಲಾಯಿತು. ಮಾದರಿ ಮೊಹರು ತಯಾರಿಸಲಾಯಿತು. ಆರೋಪಿಗೆ 41ಎ ನೋಟಿಸನ್ನು ನೀಡುತ್ತೇವೆ ಎಂದು ತಿಳಿಸಿ ಮುಂದಿನ ಕಾನೂನು ಕ್ರಮ ಮಾಡಲಾಯಿತು. ಮಹಜರ್ ಅನ್ನು 7.30 ರಿಂದ 9 ಗಂಟೆಗೆ ಮಾಡಲಾಯಿತು. ಮುದ್ದೆ ಮಾಲನ್ನು ಕಚೇರಿಗೆ ತಂದು ಆರೋಪಿಯ ವಿರುದ್ಧ ಪ್ರ.ವ.ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಸ್ಥಳದಲ್ಲಿ ಛಾಯಾ ಚಿತ್ರ ತೆಗೆದು ಕಲಂ 65ಬಿ ದೃಡೀಕರಣದೊಂದಿಗೆ ಸಲ್ಲಿಸಿರುತ್ತೇನೆ.

ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು, ಪ್ರ.ವ.ವರದಿಯನ್ನು ನಿಪಿ 2 ಎಂದು, ಸಹಿಯನ್ನು ನಿಪಿ 2ಎ ಎಂದು, ಮಹಜರ್ ಅನ್ನು ನಿಪಿ 3 ಎಂದು, ಸಹಿಯನ್ನು ನಿಪಿ 3ಎ ಎಂದು, ಲಿಸ್ಟ್ ಆಫ್ ಆರ್ಟ್ ಕಲ್ ಅನ್ನು ನಿಪಿ 4 ಎಂದು, ಸಹಿಯನ್ನು ನಿಪಿ 4ಎ ಎಂದು, ಮಾದರಿ ಮೊಹರನ್ನು ನಿಪಿ 5 ಎಂದು, ಸಹಿಯನ್ನು ನಿಪಿ 5ಎ ಎಂದು, 2 ಛಾಯಾ

ಚಿತ್ರಗಳನ್ನು ನಿಪಿ 6 ಮತ್ತು 7, ಎಂದು ಸಿಡಿಯನ್ನು ನಿಪಿ 8 ಎಂದು, ಕಲಂ 65 ಬಿ ಪ್ರಮಾಣ ಪತ್ರವನ್ನು ನಿಪಿ 9 ಎಂದು, ಶೋಧನಾ ವಾರೆಂಟ್ ಅನ್ನು ನಿಪಿ 10 ಎಂದ, ಸಹಿಯನ್ನು ನಿಪಿ 10 ಎ ಎಂದು ಗುರುತಿಸಲಾಯಿತು.

180 ಮಿಲಿಯ 10 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರ್ಯಾಂಡಿಯನ್ನು ಮುಮಾ 1 ಎಂದು, 90 ಮಿಲಿಯ 20 ಜಾನ್ಸ್ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿ.ಎಸ್.ಓ.ಪಿ ಇಂಡಿಯನ್ ಬ್ರ್ಯಾಂಡಿಯನ್ನು ಮುಮಾ 2 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಕೆ.ಎಸ್.ಪಿ ವಕೀಲರಿಂದ

ಆ ಸಮಯದಲ್ಲಿ ನಾನು ಉಪ ಆಯುಕ್ತಕರ ಕಚೇರಿ ಮಡಿಕೇರಿಯಲ್ಲಿ ಕೆಲಸ ಮಾಡುತ್ತಿದೆ. ನಮ್ಮ ಕಚೇರಿಯಿಂದ ಬಿಟ್ಟು ಬಂದರೆ ಚಲನ ವಲನದಲ್ಲಿ ನಮೂದು ಮಾಡುತ್ತೇನೆ ಎಂದರೆ ಸರಿ. ಗಸ್ತು ಪುಸ್ತಕದಲ್ಲಿ ಸಹ ಬರೆದಿರುತ್ತೇವೆ. ನಮ್ಮ ಇಲಾಖೆಯಲ್ಲಿ ಲಾಗ್ ಪುಸ್ತಕ ಇರುತ್ತದೆ, ಆ ಬಗ್ಗೆ ಬರೆಯಬೇಕು ಎಂದರೆ ಸರಿ. ಮಹಜರ್ ನಲ್ಲಿ ಇಲಾಖಾ ವಾಹನದ ನಂಬರ್ ನಮೂದು ಇಲ್ಲ ಎಂದರೆ ಸರಿ. ಸಂಜೆ 7 ಗಂಟೆಗೆ ಚಾಸಾ 5 ರವರಿಗೆ ಮಾಹಿತಿ ಬಂದಿರುತ್ತದೆ. ಬಜೆಗುಂಡಿಯಲ್ಲಿ ಎಷ್ಟುದಾಳಿ ಮಾಡಿರುತ್ತೇನೆ ಎಂದು ನೆನಪಿಲ್ಲ. ದೂರನ್ನು ಬಜೆಗುಂಡಿಯಲ್ಲಿ ಕೊಟ್ಟಿರುತ್ತಾರೆ. ದೂರು ಕೊಟ್ಟ ಬಗ್ಗೆ ಸಮಯ ನಮೂದು ಮಾಡಿಲ್ಲ. ಆದರೆ ಸ್ವೀಕರಿಸಿದ ಬಗ್ಗೆ ಚಿಕ್ಕ ಸಹಿ ಮಾಡಿರುತ್ತೇನೆ. ನನ್ನ ಪದನಾಮ ಹಾಕಿಲ್ಲ. ನಮಗೆ ಹಿಂದಿನ ಕ್ರೈಂ ನಂಬರ್ ಗೊತ್ತಿದ್ದ ಕಾರಣ ಕ್ರೈಂ ನಂಬರ್ ಮಾದರಿ ಮೊಹರಿನಲ್ಲಿ ನಮೂದು ಮಾಡುತ್ತೇವೆ. ಮಹಜರ್ ನಲ್ಲಿ ಕ್ರೈಂ ನಂಬರ್ ನಮೂದು ಮಾಡಿಲ್ಲ. ಕೃತ್ಯ ಸ್ಥಳಕ್ಕೆ ಹೋದಾಗ 7.28

ಅಂದಾಜು ಆಗಿತ್ತು. ಅವರ ಮನೆ ಪಕ್ಕದಲ್ಲಿ ಸಾಕಷ್ಟು ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ. ಸ್ವಲ್ಪ ದೂರದಲ್ಲಿದೆ. ಚಾಸಾ 2, 3 ರವರ ಮನೆ ನೋಡಿಲ್ಲ. ರಸ್ತೆ ಬಳಿ ಹೋಗುತ್ತಿದ್ದರು. ಅವರನ್ನು ನಾವೇ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಯ ಮನೆಯಲ್ಲಿ ಆ ದಿನ ಯಾರು ಇರಲಿಲ್ಲ. ಮದ್ಯವನ್ನು ಎಲ್ಲಿಂದ ತಂದಿದ್ದೀರಾ ಎಂದು ಕೇಳಿರುತ್ತೇವೆ ಅವರು ಸಮಂಜಸ ಉತ್ತರ ಕೊಟ್ಟಿಲ್ಲ. ಆರೋಪಿಯ ಕಿಸೆಯನ್ನು ಪರಿಶೀಲನೆ ಮಾಡಿಲ್ಲ ಹಣವನ್ನು ವಶಪಡಿಸಿಕೊಂಡಿಲ್ಲ. ಅಮಾನತ್ತು ಪಡಿಸಿದ ಎಲ್ಲಾ ವಸ್ತುಗಳನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಲು ತೊಂದರೆ ಇರಲಿಲ್ಲ. 3 ಪ್ಲಾಸ್ಟಿಕ್ ಚೀಲ ನ್ಯಾಯಾಲಯದ ಮುಂದೆ ಇಲ್ಲ ನಾನು ತನಿಖಾಧಿಕಾರಿಗೆ ಒಪ್ಪಿಸಿರುತ್ತೇನೆ. ಮಹಜರ್ ನಲ್ಲಿ ಮನೆ ನಂಬರ್-244 ಎಂದು ನಮೂದಾಗಿರುತ್ತದೆ. ಆರೋಪಿ ಮನೆ ನಂಬರ್ ಎಂದು ತಿಳಿಸಿದ ಕಾರಣ ನಮೂದು ಮಾಡಿರುತ್ತೇವೆ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ, ಅಲ್ಲಿ ಯಾವುದೇ ಮಹಜರ್ ಮಾಡಿಲ್ಲ, ಆರೋಪಿಗೂ ಮುದ್ದೆ ಮಾಲಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ).

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**